# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ.73 (ಹಳೆಯ ಸಂಖ್ಯೆ–46) ಜೆ.ಸಿ ನಗರ.ಬೆಂಗಳೂರು.

ಸಂಖ್ಯೆ: ಸ.ಅ/ವಾ–46(ಹಳೆಯ ಸಂಖ್ಯೆ–46)/ಪಿ.ಆರ್/21/2022–23 ದಿನಾಂಕ:–17–09–2022

## ::ವಾರ್ಡ್ ಸಮಿತಿ ಸಭೆಯ ನಡವಳಿಗಳು::

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020–21 ದಿನಾಂಕ: 21–09–2020. ರವರ ಆದೇಶದಂತೆ ದಿನಾಂಕ:–17–09–2022 ರಂದು ವಾರ್ಡ್ 73 (ಹಳೆಯ ಸಂಖ್ಯೆ–46) ಜೆ.ಸಿ ನಗರ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ. ಭೀಮಾನಾಯ್ಕ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ವಿಷ್ಣುಕಾಂತ್ | ವಾರ್ಡ್ ಕಾರ್ಯದರ್ಶಿಗಳು ಹಾಗೂ ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ–73 |
| 3. | ಶ್ರೀಮತಿ ಜಯಶ್ರೀ | ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4. | ಶ್ರೀಮತಿ ಸುವರ್ಣದೇವಿ | ವರ್ಕ್ ಇನ್ಸ್‌ಪೆಕ್ಟರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5. | ಶ್ರೀಮತಿ ಅನೀಸ್ ಫಾತೀಮಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 6. | ಶ್ರೀಮತಿ ಸೀಮಾ | ಕಿರಿಯ ಆರೋಗ್ಯ ಪರಿವೀಕ್ಷಕರು |
| 7. | ಶ್ರೀ. ಶಿವಪ್ಪ | ಮೇಲ್ವಿಚಾರಕರು (ಘನತ್ಯಾಜ್ಯ ನಿರ್ವಹಣೆ) |
| 8. | ಶ್ರೀ. ಪ್ರಣವ್ ಪೂರೆ | ಬಿ.ಬಿ.ಎಂ.ಪಿ ಮಾರ್ಷಲ್, ವಾರ್ಡ್ ಸಂಖ್ಯೆ–46 |
| 9. | ಶ್ರೀ. ವಿನಾಯಕ್ ಪಾಟೀಲ್ | ಬಿ.ಬಿ.ಎಂ.ಪಿ ಮಾರ್ಷಲ್, ವಾರ್ಡ್ ಸಂಖ್ಯೆ–46 |
| 10. | ಶ್ರೀ. ವಿವೇಕ್ | ಸಾರ್ವಜನಿಕರು |
| 11. | ಶ್ರೀಮತಿ ವಿದ್ಯಾ | ಸಾರ್ವಜನಿಕರು |
| 12. | ಡಾ.ಎ.ಎಸ್.ರಂಗನಾಥ್ | ಸಾರ್ವಜನಿಕರು |
| 13. | ಶ್ರೀ. ನಾಗೇಂದ್ರರಾವ್ ಪವಾರ್ | ಸಾರ್ವಜನಿಕರು |
| 14. | ಶ್ರೀ. ಬಿ.ಎಸ್.ಉಮೇಶ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ವಿಷ್ಣುಕಾಂತ್ ಜಾಧವ್, ಕಿರಿಯ ಅಭಿಯಂತರರು ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಭೀಮಾನಾಯ್ಕ್ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1. ದಿನ್ನೂರು ಮುಖ್ಯರಸ್ತೆ ಮತ್ತು 6ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಎಕ್ಸ್ ಸರ್ವಿಸ್‌ಮೆನ್ ಕಾಲೋನಿಯಲ್ಲಿ ಜೋತು ಬಿದ್ದಿರುವ ಓ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸಲು ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸದೇ ಇರುವ ಬೀದಿ ದೀಪಗಳನ್ನು ಸರಿಪಡಿಸುವಂತೆ ಬೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

3. ನಂದಿ ವ್ಯೂ ಲೇಔಟ್‌ನಲ್ಲಿ ತನಿಖಾ ಕೇಂದ್ರವನ್ನು ಆರಂಭಿಸಲು ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಯಿತು.
4. ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಗಿಡ ಮತ್ತು ಕಸಗಳನ್ನು ತೆರವುಗೊಳಿಸಿ ನಿವೇಶನಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ನಿವೇಶನಗಳ ಮಾಲೀಕರಿಗೆ ಸೂಚಿಸಲಾಯಿತು.
5. ನಂದಿ ವ್ಯೂ ಲೇಔಟ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ಬಗೆಹರಿಸಲು ಆರ್.ಟಿ ನಗರ ಸಂಚಾರ ಪೊಲೀಸ್ ಠಾಣೆರವರಿಗೆ ಸೂಚಿಸಲಾಯಿತು.
6. ವಾರ್ಡ್‌ನ ಬೃಹತ್ ನೀರು ಕಾಲುವೆಗೆ ಫೆನ್ಸಿಂಗ್ ಅಳವಡಿಸಲು ಬೃಹತ್ ನೀರು ಕಾಲುವೆ ವಿಭಾಗದ ಅಧಿಕಾರಿಗಳಿಗೆ ಸೂಚಿಸಲಾಯಿತು.
7. ವಾರ್ಡ್‌ನಲ್ಲಿ ಜೋತು ಬಿದ್ದಿರುವ ಮರದ ಕೊಂಬೆಗಳನ್ನು ಕತ್ತರಿಸಲು ಸೂಚಿಸಲಾಯಿತು.
8. ಪೂಜಾ ಬೇಕರಿ ಹತ್ತಿರ ಬೃಹತ್ ನೀರು ಕಾಲುವೆ ವಿಭಾಗದ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಸಂಚಾರಕ್ಕೆ ತೊಂದರೆಯಾಗಿರುವುದರಿಂದ ಪರ್ಯಾಯ ರಸ್ತೆಯನ್ನು ಮಾಡಿಕೊಡಲು ಚರ್ಚಿಸಲಾಯಿತು

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 73 ಜೆ.ಸಿ ನಗರ

17/9/22
ಅಧ್ಯಕ್ಷರು
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ನಂ: 73 ಜೆ.ಸಿ ನಗರ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ